

ಕಲಬುರ್ಗಿಯ ಕೋಟೆ ಬಹಮನಿ ರಾಜವಂಶದ ಭವ್ಯ ಇತಿಹಾಸವನ್ನು ನೆನಪಿಸುವಂತಿದೆ. ಬಯಲು ಸಂಗ್ರಹಾಲಯದಂತೆ ಕಾಣಿಸುವ ಕೋಟೆಯೊಳಗಡೆ ಇರುವ ಜಾಮಾ ಮಸೀದಿ ತನ್ನ ಅಪೂರ್ವ ವಾಸ್ತುಶಿಲ್ಪದಿಂದ ಕಲಾವಿದ್ಯಾರ್ಥಿಗಳ ಗಮನಸೆಳೆದಿದೆ.



ಆಧುನಿಕ ಬುದ್ಧವಿಹಾರ ಕಲಬುರ್ಗಿಗೆ ಬುದ್ಧಕೇಂದ್ರದ ಆಯಾಮವನ್ನೂ ದೊರಕಿಸಿಕೊಟ್ಟಿದೆ. ನಾಡಿನ ಪ್ರಮುಖ ಪ್ರವಾಸಿಕೇಂದ್ರಗಳಲ್ಲೊಂದಾದ ಈ ವಿಹಾರ, ಅಜಂತಾ–ಎಲ್ಲೋರಾ ಶೈಲಿಯ ಕಲಾಶೈಲಿಯನ್ನು ಒಳಗೊಂಡಿದೆ. ಆಕರ್ಷಕ ಸ್ತೂಪಗಳು ಹಾಗೂ ಆರೂವರೆ ಅಡಿ ಎತ್ತರದ ಸುವರ್ಣಲೇಪಿತ ಬುದ್ಧ ಮೂರ್ತಿ ಇಲ್ಲಿನ ಪ್ರಮುಖ ಆಕರ್ಷಣೆಗಳು.